ಇಂದು ಒಲಿಂಪಿಕ್ ಕ್ರೀಡೆಗಳು ಜಗತ್ತಿನಲ್ಲೇ ಅತ್ಯಂತ ಮಹತ್ವದ ಕ್ರೀಡೆಗಳಾಗಿದ್ದು, ಪ್ರಪಂಚದ ಬಹುಪಾಲು ರಾಷ್ಟ್ರಗಳ ಕ್ರೀಡಾಪಟುಗಳು ಭಾಗವಹಿಸುತ್ತಾರೆ. ದೇಶಗಳ ನಡುವಿನ ಭ್ರಾತೃತ್ವದ ಸಂಕೇತವೂ ಆದ ಈ ಒಲಿಂಪಿಕ್‌ನಲ್ಲಿ ಪದಕ ಗೆಲ್ಲುವುದು ಕ್ರೀಡಾ ಕ್ಷೇತ್ರದಲ್ಲಿಯೇ ಸರ್ವಶ್ರೇಷ್ಠ ಸಾಧನೆ ಎಂದು ಭಾವಿಸಲಾಗುತ್ತದೆ. ಇದರಲ್ಲಿ ಭಾಗವಹಿಸುವ ಪ್ರತಿಯೊಂದು ದೇಶವೂ ತನ್ನ ದೇಶದ ಬಾವುಟ ಹಿಡಿದು ಸಂಭ್ರಮಿಸುತ್ತದೆ. ಚಿನ್ನದ ಪದಕ ಗೆದ್ದ ಕ್ರೀಡಾಪಟುವಿನ ದೇಶದ ರಾಷ್ಟ್ರಗೀತೆಯನ್ನೂ ಬಿತ್ತರಿಸಲಾಗುತ್ತದೆ. ಇದು ಆ ದೇಶಕ್ಕೆ ಅತ್ಯಂತ ಹೆಮ್ಮೆಯ, ಸಂತೋಷದ ಸಂದರ್ಭ.

ಇಂಥ ವಿಶೇಷ ಮನ್ನಣೆಯಿರುವ ಈ ಒಲಿಂಪಿಕ್ ಕ್ರೀಡೆಗಳು ಪ್ರಾರಂಭವಾದದ್ದು ಹೇಗೆ? ಆ ಹೆಸರು ಹೇಗೆ ಬಂದಿತು? ಒಲಿಂಪಿಯಾಡ್ ಎಂದರೇನು? ಈ ಕುತೂಹಲಕ್ಕೆ ಒಂದು ಅದ್ಭುತ ಸ್ಥಳ ಚರಿತ್ರೆಯೇ ಇದೆ.

ಪ್ರಾಚೀನ ಗ್ರೀಸ್ ದೇಶವನ್ನು ಯೂರೋಪಿಯನ್ ಸಂಸ್ಕೃತಿ ಮತ್ತು ಸಮಾಜಕ್ಕೆ ನೀಡಿರುವ ಕೊಡುಗೆಗಳಿಂದಾಗಿ ಯೂರೋಪಿಯನ್ ನಾಗರಿಕತೆಯ ಮೂಲ ಸೆಲೆಯೆನ್ನುತ್ತಾರೆ. ಪಾಶ್ಚಿಮಾತ್ಯ ನಾಗರಿಕತೆಯ ಆಧಾರ ತತ್ವಗಳ ಅಭಿವೃದ್ಧಿಗೆ ತತ್ವಶಾಸ್ತ್ರ, ಕಲೆ, ಸಾಹಿತ್ಯ, ಪ್ರಜಾಪ್ರಭುತ್ವ ಮತ್ತು ವಿಜ್ಞಾನ ಒಳಗೊಂಡಂತೆ ಹಲವು ಕ್ಷೇತ್ರಗಳ ಬೌದ್ಧಿಕ ಕೊಡುಗೆ ನೀಡಿದೆ. ಅದೇ ರೀತಿ ಜಗತ್ತಿಗೆ ಮಹತ್ತರ ಕ್ರೀಡಾ ಕೊಡುಗೆಯನ್ನು ಸಹ ನೀಡಿದೆ. ಇಂದು ಜಗತ್ತಿನ ಅತ್ಯಂತ ಮಹತ್ತರವಾದ ಒಲಿಂಪಿಕ್ ಕ್ರೀಡೆಗಳ ಮೂಲ ಸಹ ಪ್ರಾಚೀನ ಗ್ರೀಸ್ ಆಗಿದೆ.

ನಾವು ಗ್ರೀಸ್‌ನಲ್ಲಿನ ಒಲಿಂಪಿಕ್ ಕ್ರೀಡೆಗಳ ಜನ್ಮಸ್ಥಳವಾದ ಒಲಿಂಪಿಯಾಗೆ ಕಾಲಿಟ್ಟಾಗ ಅಲ್ಲಿ ಕಂಡದ್ದು ಬರೇ ಕಟ್ಟಡಗಳ, ಶಿಲೆಗಳ ಅವಶೇಷಗಳ ರಾಶಿ. ಎಲ್ಲೆಲ್ಲೂ ಮುರಿದ ಕಲ್ಲಿನ ಕಂಬಗಳು ಹಾಗೂ ಕಟ್ಟಡಗಳ ಕಲ್ಲುಗಳು. ಅಲ್ಲಿ ದೊರೆತಿರುವ ಹಲವು ವಸ್ತುಗಳನ್ನು ಅಲ್ಲಿಯೇ ಇರುವ ಮ್ಯೂಸಿಯಂನಲ್ಲಿ ಇರಿಸಿದ್ದಾರೆ ಹಾಗೂ ಫ್ರಾನ್ಸ್, ಜರ್ಮನಿ, ಇಂಗ್ಲೆಂಡ್ ಮುಂತಾದ ದೇಶಗಳು ಈ ಹಿಂದೆ ಅಲ್ಲಿ ಉತ್ಖನನದಲ್ಲಿ ತೊಡಗಿದ್ದ ಸಂದರ್ಭ, ಅವೂ ಹಲವಾರು ವಸ್ತುಗಳನ್ನು ಕೊಂಡೊಯ್ದು ತಮ್ಮ ದೇಶಗಳ ಮ್ಯೂಸಿಯಂಗಳಲ್ಲಿ ಪ್ರದರ್ಶನಕ್ಕಿಟ್ಟಿವೆ.



ಆ ಅವಶೇಷಗಳ ಮಧ್ಯೆ ನಿಂತಾಗ ಎರಡು ಸಾವಿರಕ್ಕೂ ಹೆಚ್ಚು ವರ್ಷಗಳ ಹಿಂದೆ ಅಲ್ಲಿ ಸೇರುತ್ತಿದ್ದ ಸಾವಿರಾರು ಜನರ ಉತ್ಸಾಹ, ಪ್ರೋತ್ಸಾಹದ ಕೂಗಾಟ ನಮಗೆ ಈಗಲೂ ಕೇಳುತ್ತಿರುವಂತೆ ಭಾಸವಾಗುತ್ತದೆ. ಅಲ್ಲಿ ಸುಮಾರು 2700 ವರ್ಷಗಳ ಹಿಂದೆ ನಿರ್ಮಿಸಿದ ಹಾಗೂ 40 ಸಾವಿರ ಜನ ಕೂಡಬಹುದಾದ ಸ್ಟೇಡಿಯಂ ಈಗಲೂ ಇದೆ (ಸ್ಟೇಡಿಯಂ ಎನ್ನುವುದು ಗ್ರೀಕ್ ಪದ 'ಸ್ಟೇಡಿಯಾನ್'ನ ಲ್ಯಾಟಿನ್ ರೂಪ. ಸ್ಟೇಡಿಯಾನ್ ಎಂದರೆ 600 ಹೆಜ್ಜೆಗಳ ದೂರ). ಅಲ್ಲಿ ಓಟದ ಸ್ಪರ್ಧಿಗಳು ಓಡಲು ಪ್ರಾರಂಭಿಸುವ ಗೆರೆ (ಅಮೃತಶಿಲೆಯಲ್ಲಿ ಕೊರೆದಿರುವುದು) ಈಗಲೂ ಅದೇ ಸ್ಥಳದಲ್ಲಿಯೇ ಇದೆ. ಅಷ್ಟು ವರ್ಷಗಳ ಹಿಂದೆ ಕ್ರೀಡೆಗಳಿಗಾಗಿ ಸಾವಿರಾರು ಜನ ಅಲ್ಲಿ ಉತ್ಸಾಹದಿಂದ ಸೇರಿರುತ್ತಿದ್ದರು. ಆಲಿವ್ ತೈಲ ಮೈಗೆ ಹಚ್ಚಿಕೊಂಡು ನಗ್ನವಾಗಿ ಅಭ್ಯಾಸ ಮಾಡುವ ಕ್ರೀಡಾಪಟುಗಳು 'ಜಿಮ್ನೇಸಿಯಂ'ನಲ್ಲಿ (ಜಿಮ್ನೇಸಿಯಂ ಎನ್ನುವುದು ಗ್ರೀಕ್ ಮೂಲದ ಪದ. ಗ್ರೀಕ್ ಭಾಷೆಯಲ್ಲಿ ಜಿಮ್ನೊ ಎಂದರೆ ಬೆತ್ತಲೆ ಎಂದರ್ಥ. ಗ್ರೀಕ್ ಕ್ರೀಡಾಪಟುಗಳು ಬೆತ್ತಲೆಯಾಗಿ ದೈಹಿಕ ವ್ಯಾಯಾಮ ನಡೆಸುತ್ತಿದ್ದ ಸ್ಥಳ ಜಿಮ್ನೇಸಿಯಾನ್) ಕಂಡುಬರುತ್ತಿದ್ದರು.



ಕ್ರಿ.ಪೂ. 5ನೇ ಶತಮಾನದ ಪ್ರಾರಂಭದ ಗ್ರೀಕ್ ಮಣ್ಣಿನ ಜಾಡಿಯ ಮೇಲೆ 'ಪ್ಯಾಂಕ್ರೇಶನ್' ಬಾಕ್ಸಿಂಗ್ ಸ್ಪರ್ಧೆಯ ಪಟುಗಳು. ಅವರು ಕೈಗೆ ಚರ್ಮದ ಪಟ್ಟಿಯನ್ನು ಸುತ್ತಿ ಕೊಂಡಿರುವುದನ್ನು ಗಮನಿಸಬಹುದು.



ಡಿಸ್ಕಸ್ ಎಸೆಯುತ್ತಿರುವ 'ಮೈರಾನ್'ನ ಡಿಸ್ಕೋಬೋಲಸ್' ಪ್ರತಿಮೆ ಜಗತ್ಪ್ರಸಿದ್ಧ. ಕ್ರಿ.ಪೂ. 5ನೇ ಶತಮಾನದಲ್ಲಿ ಅಥೆನ್ಸಿನ ಮೈರಾನ್ ಎಂಬಾತ ಈ ಪ್ರತಿಮೆ ಕೆತ್ತಿದ್ದ. ಆದರೆ ಇಂದು ಆ ಪ್ರತಿಮೆ ಇಲ್ಲ. ರೋಮನ್ನರು ಅದರ ಹಲವಾರು ಪ್ರತಿಗಳನ್ನು ಕಂಚು ಮತ್ತು ಅಮೃತಶಿಲೆಯಲ್ಲಿ ನಿರ್ಮಿಸಿದ್ದು ಈ ಚಿತ್ರದಲ್ಲಿರುವುದು ಕ್ರಿ.ಶ. 2ನೇ ಶತಮಾನದಲ್ಲಿ ನಿರ್ಮಿಸಿದ್ದೆನ್ನಲಾಗಿದೆ.

ಕ್ರೀಡೆಗಳನ್ನು ನೋಡಲು ರಾಜ ಮಹಾರಾಜರಿಂದ ಹಿಡಿದು, ಜನಸಾಮಾನ್ಯರೂ ಬಂದಿರುತ್ತಿದ್ದರು. ಆದರೆ ಅಲ್ಲಿ, ನಮ್ಮ ಕೇರಳದ ಅಯ್ಯಪ್ಪನ ದೇವಾಲಯಕ್ಕೆ ಸಣ್ಣ ಹುಡುಗಿಯರನ್ನು ಬಿಟ್ಟು ಮೈನರೆದ ಮಹಿಳೆಯರನ್ನು ಹೇಗೆ ಬಿಡುವುದಿಲ್ಲವೋ ಹಾಗೆಯೇ ಒಲಿಂಪಿಯಾದಲ್ಲಿ ಮಹಿಳೆಯರಿಗೆ ವೀಕ್ಷಣೆಗೆ, ಭಾಗವಹಿಸುವಿಕೆಗೆ ಅವಕಾಶವಿರಲಿಲ್ಲ. ಮಂದಿರದ 'ಪೂಜಾರಿಣಿ'ಗೆ ಮಾತ್ರ ಪ್ರವೇಶಾವಕಾಶವಿತ್ತು ಹಾಗೂ ಆಕೆಗೆ ಸ್ಟೇಡಿಯಂನಲ್ಲಿ ಪ್ರತ್ಯೇಕ ಆಸನವಿರುತ್ತಿತ್ತು. ಮಹಿಳೆಯರಿಗೆ ನೋಡಲೂ ಅವಕಾಶವಿರಲಿಲ್ಲ. ಯಾರಾದರೂ ಮಹಿಳೆಯರು ವೀಕ್ಷಕರಾಗಿ ಕದ್ದು ಮುಚ್ಚಿ ಬಂದಲ್ಲಿ ಅವರಿಗೆ ಶಿಕ್ಷೆಯಾಗಿ ಮರಣದಂಡನೆಯನ್ನೇ (ಕ್ರೋನೋಸ್ ಪರ್ವತದಿಂದ ತಳ್ಳಿ) ನೀಡುತ್ತಿದ್ದರಂತೆ. ಆದರೆ ಒಮ್ಮೆ ಹೋರ್ಡ್ಸ್ ದ್ವೀಪದ ಫೆರೆನೀಸ್ ಎಂಬ ಒಲಿಂಪಿಕ್ ವೀರರ ಕುಟುಂಬದಿಂದ ಬಂದಿದ್ದ ಮಹಿಳೆ (ಆಕೆಯ ತಂದೆ, ಸಹೋದರರು, ಮಕ್ಕಳು ಒಲಿಂಪಿಕ್ ವಿಜೇತರಾಗಿದ್ದರು) ತನ್ನ ಮಗ ಪೀಸಿಹೋರ್ಡಸ್‌ನ ಓಟದ ಸ್ಪರ್ಧೆ ನೋಡಲೇಬೇಕೆಂದು ಗಂಡಸರ ವೇಷ ಧರಿಸಿ ಬಂದಿದ್ದಳಂತೆ. ತನ್ನ ಮಗ ಸ್ಪರ್ಧೆಯಲ್ಲಿ ವಿಜೇತನಾದಾಗ ಸಂತೋಷದಿಂದ ತನ್ನ ಮಾರುವೇಷ ಮರೆತು ಎದ್ದು ಕುಣಿದಾಗ ಆಕೆಯ ಮಾರುವೇಷ ಕಳಚಿಬಿದ್ದು ಆಕೆ ಮಹಿಳೆಯೆಂದು ತಿಳಿಯಿತು. ಆಕೆಯನ್ನು ಬಂಧಿಸಿದರು. ಆದರೆ,